FOREST DEPARTMENT KARNATAKA

isha

ನದಿಗಳನ್ನು ರಕ್ಷಿಸಿ
ಭಾರತದ ಜೀವನಾಡಿಗಳು

ಇಂದೇ ಕಣಕ್ಕೆ!

ಕಾವೇರಿ ಕೂಗು



# ಮರ ಆಧಾರಿತ ಕೃಷಿಯನ್ನು ರೂಢಿಸಿಕೊಂಡು ಲಕ್ಷಾಧಿಪತಿಗಳಾಗಿ ಮತ್ತು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಿಂದ ಪ್ರತಿ ಹೆಕ್ಟೇರಿಗೆ ರೂ. 50,000 ವರೆಗೆ ಪ್ರೋತ್ಸಾಹ ಧನ ಪಡೆಯಿರಿ

**ವಿನಾಯಕ್ ಭಟ್, ಯಶಸ್ವಿ ರೈತ:**


"ನನ್ನ ಬಳಿ 2500 ಶ್ರೀಗಂಧದ ಮರಗಳಿವೆ ಮತ್ತು ಅವು ನನಗೆ 85 ಕೋಟಿ ಮೌಲ್ಯದ ಆದಾಯವನ್ನು ನೀಡುತ್ತವೆ!"

**ತಮ್ಮ ಜಮೀನಿನಲ್ಲಿ ಸ್ವಂತ ಎಟಿಎಂ ಬೆಳೆಯುತ್ತಿರುವ ರಮಾನಂದ್:**

"ಕೇವಲ ಐದು ವರ್ಷಗಳಲ್ಲಿ ನಾನು ರೂ. 45 ಲಕ್ಷ ಮೌಲ್ಯದ ಮರಗಳನ್ನು ಹೊಂದಿರುವ ಜಮೀನನ್ನು ಮಾಡಿದ್ದೇನೆ" ಎಂದು ರಾಮಾನಂದ್ ತಮ್ಮ ಸಾಧಾರಣ 2.15 ಎಕರೆ ಜಮೀನಿನಲ್ಲಿ ನಿಂತು ಹೇಳುತ್ತಾರೆ. "ನಾನು ಹಣಕಾಸಿನ ತೊಂದರೆಯಲ್ಲಿದ್ದಾಗ, 12 ಹೆಬ್ಬೇವು ಮರಗಳನ್ನು 40,000 ರೂ. ಗಳಿಗೆ ಮಾರಾಟ ಮಾಡಿದೆ ಹಾಗು ಆರಾಮವಾಗಿ ತುರ್ತು ಪರಿಸ್ಥಿತಿಯಿಂದ ಪಾರಾದೆ." ಅವರು 150 ತೇಗದ ಮರಗಳು, 100 ತೆಂಗಿನ ಮರಗಳು, 50 ಸಿಲ್ವರ್ ಓಕ್ ಮತ್ತು 50 ಹೆಬ್ಬೇವುಗಳನ್ನು ಹೊಂದಿದ್ದಾರೆ.

# ಮರ ಆಧಾರಿತ ಕೃಷಿಯಿಂದ ಪ್ರಯೋಜನಗಳು

## ಆದಾಯ




- ನಿಮ್ಮ ಜಮೀನಿನ ಒಂದು ಭಾಗದಲ್ಲಿ ಮರಗಳನ್ನು ನೆಡುವುದರ ಮೂಲಕ ನೀವು ಅಧಿಕ ಸಂಪತ್ತನ್ನು ಗಳಿಸಬಹುದು.
- ಟಿಂಬರ್ ಮರಗಳು ನಿಮ್ಮ ವಿಮೆಯಾಗಿಯೂ ಕಾರ್ಯನಿರ್ವಹಿಸುತ್ತವೆ - ಹಣಕಾಸಿನ ಸವಾಲುಗಳ ಸಂದರ್ಭದಲ್ಲಿ ಅವು ನಿಮ್ಮನ್ನು ರಕ್ಷಿಸುತ್ತವೆ.
- ಬರ ಮತ್ತು ಪ್ರವಾಹದ ಅಪಾಯದಲ್ಲಿ, ಮರ ಆಧಾರಿತ ಕೃಷಿಯು ಅಳವಡಿಸಿಕೊಳ್ಳಲು ಅತ್ಯಂತ ಮಿತವ್ಯಯ ಮತ್ತು ಕಾರ್ಮಿಕ-ಮುಕ್ತ ವ್ಯವಸ್ಥೆಯಾಗಿದೆ.
- ಅಂತರ್ ಬೆಳೆಗಳನ್ನು ಬೆಳೆಯುವುದರಿದಂದ, ವರ್ಷವಿಡೀ ಸ್ಥಿರವಾದ ಆದಾಯವನ್ನು ಗಳಿಸಬಹುದು ಮತ್ತು ನಿಮ್ಮ ಪ್ರಸ್ತುತ ಯಾವುದೇ ಬೆಳೆಗಳ ಜೊತೆಗೆ ದೊಡ್ಡ ಬದಲಾವಣೆಗಳಿಲ್ಲದೆ ಬೆಳೆಯಬಹುದು.

## ಇತರ ಬೆಳೆಗಳಿಗಾಗುವ ಪ್ರಯೋಜನ



**ಕಡಿಮೆಯಾಗುವ ಕೀಟಗಳು ಮತ್ತು ರೋಗಗಳು:** ಮರ ಆಧಾರಿತ ಕೃಷಿಯನ್ನು ಅಂತರ್ ಬೆಳೆಯೊಂದಿಗೆ ರೂಢಿಸಿಕೊಂಡಾಗ, ಸಾಮಾನ್ಯ ಬೆಳೆಗಳಲ್ಲಿ ಕೀಟಗಳು ಮತ್ತು ರೋಗಗಳ ಪ್ರಭಾವವನ್ನು ಕಡಿಮೆ ಮಾಡುತ್ತದೆ ಎಂದು ಸಾಬೀತಾಗಿದೆ.

**ಗಾಳಿಯಿಂದ ರಕ್ಷಣೆ:** ಬದುಗಳಲ್ಲಿ ಮರಗಳನ್ನು ನೆಡುವುದರಿಂದ ಅವು ಬೀಸುವ ಗಾಳಿಯಿಂದ ಪ್ರಸ್ತುತ ಬೆಳೆಗಳಿಗೆ ರಕ್ಷಣೆಯನ್ನು ಕೊಡುತ್ತವೆ ಮತ್ತು ನೀರು ಆವಿಯಾಗದಂತೆ ತಡೆಯುತ್ತದೆ.

## ಕಡಿಮೆ ನೀರಿನ ಅವಶ್ಯಕತೆ



- ನೀರಿನ ತೊಂದರೆಯಿರುವ ರೈತರಿಗೆ ಈ ವಿಧಾನವು ಸೂಕ್ತವಾಗಿರುತ್ತದೆ.
- ಮರಗಳು ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತವೆ.

## ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ

ಬಿದ್ದ ಎಲೆಗಳು ಮತ್ತು ಕೊಂಬೆಗಳು ಮಣ್ಣಿನ ಫಲವತ್ತತೆಯನ್ನು ಸುಧಾರಿಸುತ್ತದೆ ಮತ್ತು ಮರಗಳ ಆಳವಾದ ಬೇರುಗಳು ಮಣ್ಣಿನ ಸರಂಧ್ರತೆಯನ್ನು ಹೆಚ್ಚಿಸುತ್ತವೆ.

ಪ್ರವಾಹದ ಸಮಯದಲ್ಲಿ ಮರಗಳ ಬೇರುಗಳಿಂದ ಮಣ್ಣು ಸುರಕ್ಷಿತವಾಗಿ ಹಿಡಿದಿಡಲ್ಪಡುತ್ತದೆ, ಮತ್ತು ಬರಗಾಲದ ಸಮಯದಲ್ಲಿ, ಮರಗಳು ಮಣ್ಣು ಮತ್ತು ವಾತಾವರಣದಲ್ಲಿನ ತೇವಾಂಶವನ್ನು ಕಾಪಾಡಿಕೊಳ್ಳುತ್ತವೆ, ಪ್ರವಾಹ ಮತ್ತು ಬರಗಾಲದ ಪರಿಣಾಮಗಳನ್ನು ಕಡಿಮೆ ಮಾಡುತ್ತದೆ.



## ಪ್ರಸ್ತಾವಿತ ಹೆಚ್ಚಿನ ಮೌಲ್ಯದ ಮರ ಪ್ರಭೇದಗಳು:

ತೇಗ, ಹೆಬ್ಬೇವು, ನೇರಳೆ, ಬೀಟೆ, ಅರಿಶಿನ ತೇಗ, ಮತ್ತಿ, ಮಹಾಗನಿ, ಹೊನ್ನೆ, ಹಲಸು, ಬೇವು, ಶಿವನೆ, ರಕ್ತ ಚಂದನ, ಶ್ರೀಗಂಧ, ಮತ್ತು ಬಿದಿರು (ಹುಲ್ಲಿನ ತಳಿ)

## ಸ್ಥಿರವಾದ ಆದಾಯಕ್ಕೆ ಸೂಚಿಸಲಾದ ಅಂತರ್ ಬೆಳೆಗಳು

ನೆಲಗಡಲೆ, ತರಕಾರಿಗಳು, ಉದ್ದನೆಯ ಮೆಣಸು (ಪೈಪರ್ ಲಾಂಗಮ್), ಲವಂಗ, ಅನೇಕ ಪ್ರಭೇದಗಳ ಬೇಳೆಕಾಳುಗಳು, ವೆನಿಲ್ಲಾ ಕ್ಲೈಂಬರ್ಸ್, ಎಲಿಫಂಟ್ ಯಾಮ್, ಅರಿಶಿನ, ನುಗ್ಗೆ ಮತ್ತು ಪಪ್ಪಾಯಿ ಇತ್ಯಾದಿ.

## ಕಾವೇರಿ ಕೂಗು ಮತ್ತು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ

ಅನೇಕ ವರ್ಷಗಳಿಂದ ಈಶಾ ಔಟ್‌ರೀಚ್, ದಕ್ಷಿಣ ಭಾರತದಲ್ಲಿ ಮರ ಆಧಾರಿತ ಕೃಷಿಯಲ್ಲಿ ಪರಿಣತಿಯನ್ನು ಹೊಂದಿದೆ ಮತ್ತು ರೈತರು ತಮ್ಮ ಆದಾಯವನ್ನು ಹಲವು ಪಟ್ಟು ಹಚ್ಚಿಸಲು ಸಹಾಯ ಮಾಡಿದೆ. ಈಶಾ ಔಟ್‌ರೀಚ್ ನ ಉಪಕ್ರಮವಾಗಿ, ಕಾವೇರಿ ಕೂಗು ಅಭಿಯಾನದ ಮುಖ್ಯ ಉದ್ದೇಶ ರೈತರ ಆದಾಯವನ್ನು 3 ರಿಂದ 8 ಪಟ್ಟು ಹಚ್ಚಿಸುವುದು ಮತ್ತು ಕಾವೇರಿ ನದಿಯನ್ನು ಪುನರುಜ್ಜೀವನಗೊಳಿಸುವುದು.

ಕಾವೇರಿ ಜಲಾನಯನ ಪ್ರದೇಶದ ರೈತರಲ್ಲಿ ಮರ ಆಧಾರಿತ ಕೃಷಿಯನ್ನು ಉತ್ತೇಜಿಸಲು ಕೃಷಿ ಅರಣ್ಯ ಪ್ರೊತ್ಸಾಹ ಯೋಜನೆಯ ಮೂಲಕ ಕರ್ನಾಟಕದ ಅರಣ್ಯ ಇಲಾಖೆಯೊಂದಿಗೆ ಈಶಾದ ಕಾವೇರಿ ಕೂಗು ಯೋಜನೆಯು ಕೆಲಸ ಮಾಡುತ್ತಿದೆ.

## ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಏನನ್ನು ನೀಡುತ್ತದೆ



**ಕಡಿಮೆ ದರದಲ್ಲಿ ಸಸಿಗಳು:** ಕಾರ್ಯಕ್ರಮದ ಮಾರ್ಗಸೂಚಿಗಳ ಪ್ರಕಾರ, ರೈತರು, ಸಾರ್ವಜನಿಕರು ಮತ್ತು ಎನ್‌ಜಿಒಗಳು ಮೊಳಕೆ ಸಸಿಗಳನ್ನು 5"x8", 6"x9" ಗಾತ್ರದ ಪಾಕೆಟ್‌ಗಳಿಗೆ ಸಬ್ಸಿಡಿ ದರ ರೂ 1. ಗೆ ಮತ್ತು 8"x12" ಗಾತ್ರದ ಪಾಕೆಟ್‌ಗಳಿಗೆ ಸಬ್ಸಿಡಿ ದರ ರೂ. 3 ರಂತೆ ಪಡೆಯಬಹುದು.

**ಬದುಕುಳಿಯುವ ಸಸಿಗಳಿಗೆ ಸಹಾಯಧನ:** ಬದುಕುಳಿದಿರುವ ಪ್ರತಿ ಸಸಿಗಳಿಗೆ 125 ರೂ. ರಂತೆ, ಪ್ರತಿ ಹೆಕ್ಟೇರ್ ಗೆ ರೂ. 50,000 ವರೆಗೂ ನೀಡಲಾಗುತ್ತದೆ.

ರೂ. 35, ಮೊದಲ ವರ್ಷದ ಕೊನೆಯಲ್ಲಿ, ರೂ. 40 ಎರಡನೇ ವರ್ಷದಲ್ಲಿ ಹಾಗೂ ಮೂರನೇ ವರ್ಷದಲ್ಲಿ 50 ರೂ. ರೈತರು ತಾವು ಬಯಸಿದಷ್ಟು ಸಸಿಗಳನ್ನು ನೆಡಬಹುದು, ಆದಾಗ್ಯೂ ಪ್ರೋತ್ಸಾಹ ಧನವು ಪ್ರತಿ ಹೆಕ್ಟೇರಿಗೆ 400 ಮರಗಳವರೆಗೆ ಲಭ್ಯವಿದೆ.

## ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಕಾರ್ಯಕ್ರಮಕ್ಕೆ ಇರುವ ನೋಂದಣಿ ಪ್ರಕ್ರಿಯೆ:

ನಿಮ್ಮ ಹತ್ತಿರದ ಅರಣ್ಯ (ರೇಂಜ್ ಆಫೀಸ್) ಕಚೇರಿಗೆ ಈ ಕೆಳಗಿನ ದಾಖಲಾತಿಗಳ ಜೊತೆ ಭೇಟಿ ನೀಡಬೇಕು.

1.) ನಿಮ್ಮ ಪಹಣಿ ಅಥವಾ ಆರ್‌ಟಿಸಿಯ ಒಂದು ಪ್ರತಿ

2.) ಬ್ಯಾಂಕ್ ಪಾಸ್‌ಬುಕ್ ನ ಪ್ರತಿ

3.) ಆಧಾರ್ ಕಾರ್ಡ್‌ನ ಒಂದು ಪ್ರತಿ (ಮೂಲಪ್ರತಿಯ ಜೊತೆ) ಮತ್ತು

4.) 2 ಪಾಸ್‌ಪೋರ್ಟ್ ಅಳತೆಯ ಫೋಟೋಗಳು

ನೀವು ನೋಂದಣಿ ಫಾರ್ಮ್ ಅನ್ನು ಭರ್ತಿ ಮಾಡಬೇಕು ಮತ್ತು ನಿಮ್ಮ ಕೃಷಿಭೂಮಿಯ ರೇಖಾಚಿತ್ರವನ್ನು ಬಿಡಿಸಬೇಕು. ನೋಂದಣಿ ಶುಲ್ಕವಾಗಿ ರೂ. 10 ಪಾವತಿಸಬೇಕು.

## ಮರಗಳನ್ನು ಇಂದೇ ನೆಡಿ

- ನಿಮಗೆ ತಿಳಿದಿರುವಂತೆ, ಈ ಋತುವಿನಲ್ಲಿ (ಮುಂಗಾರು) ಮರಗಳನ್ನು ನೆಡುವುದು ಅವುಗಳ ಉತ್ತಮ ಬೆಳವಣಿಗೆಯನ್ನು ಖಚಿತಪಡಿಸುತ್ತದೆ.
- ನೀವು ಮರಗಳನ್ನು ನಿಮ್ಮ ಸಂಪೂರ್ಣ ಭೂಮಿಯಲ್ಲಿ ನೆಡಬಹುದು ಅಥವಾ ನಿಮ್ಮ ಭೂಮಿಯ ಬದುವಿನಲ್ಲಿ ಮಾತ್ರ ನೆಡಬಹುದು ಮತ್ತು ನಿಯಮಿತ ಬೆಳೆಗಳನ್ನು ಬೆಳೆಯುವುದನ್ನು ಮುಂದುವರೆಸಬಹುದು.

**ಹೆಚ್ಚಿನ ಮಾಹಿತಿಗಾಗಿ ಕಾವೇರಿ ಕೂಗು ಸಹಾಯವಾಣಿ -**

**80009 80009 ಗೆ ಕರೆ ಮಾಡಿ.**